ಶ್ರೀ ಎನ್.ರಾಜಣ್ಣ, (ಭಾರತಿನಗರ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಯುನಾನಿ ಕಾಲೇಜುಗಳೆಷ್ಟು? (ಖಾಸಗಿ ಮತ್ತು ಸರ್ಕಾರ ಎರಡೂ ಸೇರಿ).

ಆ) ಅವುಗಳು ಯಾವ ಸ್ಥಳದಲ್ಲಿವೆ?

ಇ) ಖಾಸಗಿ ಆಡಳಿತ ಮಂಡಳಿಯವರಿಗೆ ರಾಜ್ಯದಲ್ಲಿ ಯುನಾನಿ ಕಾಲೇಜು ತೆಗೆಯಲು ಸ್ವೀಕೃತಗೊಂಡಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಈ) ಈ ಸಂಬಂಧದಲ್ಲಿ ತೆಗೆದುಕೊಂಡ ಕ್ರಮಗಳೇನು?

ಡಾ॥ ಎಂ.ಶಂಕರ್‌ನಾಯ್ಕ್ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ 2 ಯುನಾನಿ ಕಾಲೇಜು ಗಳು ಕಾರ್ಯ ನಿರ್ವಹಿಸುತ್ತಿವೆ. ಒಂದು ಸರ್ಕಾರಿ ಒಂದು ಖಾಸಗಿ.

ಆ) 1) ಸರ್ಕಾರಿ ಯುನಾನಿ ಕಾಲೇಜು, ಬೆಂಗಳೂರು.

2) ಬಿ.ಎಲ್.ಕರಡಿ ಯುನಾನಿ ಕಾಲೇಜು, ಬಿಜಾಪುರ.

ಇ) ಖಾಸಗಿ ಆಡಳಿತ ಮಂಡಳಿಯವರಿಂದ ರಾಜ್ಯದಲ್ಲಿ ಯುನಾನಿ ಕಾಲೇಜುಗಳನ್ನು ತೆಗೆಯಲು 2 ಅರ್ಜಿಗಳು ಸ್ವೀಕೃತಗೊಂಡಿವೆ. ಒಂದು ಗುಲ್ಬರ್ಗಾದಲ್ಲಿ ಇನ್ನೊಂದು ತುಮಕೂರಿನಲ್ಲಿ.

ಈ) ಈ ಕಾಲೇಜುಗಳಿಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಸಂಯೋಜನೆ ಶಿಫಾರಸ್ಸು ನೀಡಿದೆ. ವಿಶ್ವವಿದ್ಯಾಲಯದ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳ ಕುರಿತು

2495 (3611)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಎಷ್ಟು ಜನರನ್ನು ತಾತ್ಕಾಲಿಕ ಸೇವೆ ಆಧಾರದಲ್ಲಿ ನೇಮಿಸಲಾಗಿದೆ? ಅವರುಗಳು ಯಾರು ಯಾರು? ಯಾವ ಯಾವ

ಹುದ್ದೆಗಳಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ?

ಆ) ಆಡಳಿತ ಮಂಡಳಿಯ ಸಭೆಯಲ್ಲಿ ಈ ತಾತ್ಕಾಲಿಕ ಸೇವೆಯಲ್ಲಿರುವವರನ್ನು ರೆಗುಲರೈಸ್ ಮಾಡುವ ಪ್ರಸ್ತಾವನೆ ಇದೆಯೇ? ಹಾಗಿದ್ದಲ್ಲಿ ಯಾರು ಯಾರ ಸೇವೆಯನ್ನು ಯಾವ ಕಾರಣದ ಆಧಾರದ ಮೇಲೆ ರೆಗ್ಯುಲರೈಸ್ ಮಾಡಲು ಯೋಜಿಸಲಾಗಿದೆ.

ಡಾ: ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ತಾತ್ಕಾಲಿಕವಾಗಿ 36 ನೌಕರರನ್ನು ನೇಮಿಸಲಾಗಿದೆ. ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ.

ಆ) ಆಡಳಿತ ಮಂಡಳಿಯ ಸಭೆಯಲ್ಲಿ ಈ ಮತ್ತೊಂದು ಸೇವೆಯಲ್ಲಿರುವ ನೌಕರರನ್ನು ರೆಗ್ಯುಲರೈಸ್ ಮಾಡುವ ಪ್ರಸ್ತಾವನೆ ಬಂದಿಲ್ಲ.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ನೇಮಿಸಿರುವ ನೌಕರರ ವಿವರಗಳು

ಕ್ರಮ ಸಂಖ್ಯೆ	ಹೆಸರು	ಪದನಾಮ
1	ಭಾಗ್ಯಲಕ್ಷ್ಮಿ ಬಿ.ಎಲ್	ಪ್ರೋಗ್ರಾಂ ಅಸಿಸ್ಟೆಂಟ್
2	ಯೋಗೇಗೌಡ.ಎಸ್	ಜೂನಿಯರ್ ಅಸಿಸ್ಟೆಂಟ್
3	ಎ.ಜಿ.ತಿಲಕ್	ಜೂನಿಯರ್ ಅಸಿಸ್ಟೆಂಟ್
4	ಎಂ.ಎನ್.ಕೆಂಪೇಗೌಡ	ಜೂನಿಯರ್ ಅಸಿಸ್ಟೆಂಟ್
5	ಶಿವಚಂದ್ರ ಪ್ರಕಾಶ್	ಜೂನಿಯರ್ ಅಸಿಸ್ಟೆಂಟ್
6	ನಾಗೇಂದ್ರ ಬಿ.ಹೆಚ್	ಜೂನಿಯರ್ ಅಸಿಸ್ಟೆಂಟ್
7	ರಮೇಶ.ಹೆಚ್.ಎನ್	ಜೂನಿಯರ್ ಅಸಿಸ್ಟೆಂಟ್
8	ಗೋವಿಂದ	ಜೂನಿಯರ್ ಅಸಿಸ್ಟೆಂಟ್
9	ಸೋಮಶೇಖರ್.ಕೆ	ಜೂನಿಯರ್ ಅಸಿಸ್ಟೆಂಟ್
10	ಕೆ.ರಾಮಸ್ವಾಮಿ	ಜೂನಿಯರ್ ಅಸಿಸ್ಟೆಂಟ್
11	ಎಸ್.ಡಿ.ಶಿವಕುಮಾರ್	ಕಂಪ್ಯೂಟರ್ ಆಪರೇಟರ್
12	ಎಸ್.ಎಲ್.ಮಂಜುಳ	ಕಂಪ್ಯೂಟರ್ ಆಪರೇಟರ್
13	ಎ.ಪಿ.ಪ್ರಭುಶಂಕರ	ಟೆಲಿಫೋನ್ ಆಪ್‌ರೇಟರ್
14	ಎನ್.ಪ್ರಕಾಶ್	ಟೈಪಿಸ್ಟ್

15	ಎಮ್.ಎಮ್.ಶಾಂತಿ	ಟೈಪಿಸ್ಟ್
16	ಜಯದೇವ ಊರ್ವ	ಟೈಪಿಸ್ಟ್
17	ಬಿ.ಆರ್.ಅಮರ್‌ನಾಥ್	ಟೈಪಿಸ್ಟ್
18	ಬಿ.ಸುನಂದ	ಟೈಪಿಸ್ಟ್
19	ಟಿ.ಸಿ.ನರಸಿಂಹ	ಡ್ರೈವರ್
20	ಬಿ.ಎಮ್.ಹೇಮಂತ್‌ಕುಮಾರ್	ಡ್ರೈವರ್
21	ಮಹದೇವಯ್ಯ	ಡ್ರೈವರ್
22	ಟಿ.ಎನ್.ಜಯ್‌ರಾಮ್	ಅಟೆಂಡರ್
23	ಎಮ್.ಆರ್.ದಿಲೀಪ್	ಅಟೆಂಡರ್
24	ಎಸ್.ಶಿವಸ್ವಾಮಿ	ಅಟೆಂಡರ್
25	ಎಸ್.ಸಿ.ವಿಜಯ್‌ಕುಮಾರ್	ಅಟೆಂಡರ್
26	ಷಣ್ಮುಖಯ್ಯ	ಅಟೆಂಡರ್
27	ಎಸ್.ಆರ್.ಗೋಪಾಲ್	ಪ್ಲಂಬರ್
28	ನಾಗರಾಜ	ಸಹಾಯಕರು
29	ಮಹದೇವಮ್ಮ	ಸಹಾಯಕರು
30	ಪ್ರೇಮಾವತಿ	ಸಹಾಯಕರು
31	ಆರ್.ಮೀನಾಕ್ಷಿ	ಸಹಾಯಕರು
32	ಜಯಕುಮಾರ್	ಗ್ರೂಪ್ 'ಡಿ' ನೌಕರರು
33	ಈರಣ್ಣ	ಗ್ರೂಪ್ 'ಡಿ' ನೌಕರರು
34	ಜೆ.ಹೆಚ್.ರವಿ	ಗ್ರೂಪ್ 'ಡಿ' ನೌಕರರು
35	ಎನ್.ಸುಂದರೇಶ್	ಗ್ರೂಪ್ 'ಡಿ' ನೌಕರರು
36	ಖಲೀಮುಲ್ಲಾಖಾನ್	ಡ್ರೈವರ್

ವಿಷಯ: ವಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವುದು

2496 (3178)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದವರ ಮುಂದಿದೆಯೇ;

ಆ) ಹಾಗಿದ್ದಲ್ಲಿ ಗುಳೇದಗುಡ್ಡ ಮತಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ